**<u>ಸಾಕ್ಷಿಯನ್ನು ದಿನಾಂಕಃ 22.11.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಬಿ.ಎಸ್.ಎಸ್. ವಕೀಲರಿಂದಃ</u>**

ದಾವಾ ಆಸ್ತಿಯು ತಮಗೆ ಹೇಗೆ ಬಂದಿರುತ್ತದೆಂದು ಕೇಳಲಾಗಿ ಸಾಕ್ಷಿಯು ಬಗರ್-ಹುಕುಂ ಅಡಿಯಲ್ಲಿ ವ್ಯವಸಾಯ ಮಾಡುತ್ತಿದ್ದು, ಸರ್ಕಾರದಿಂದ ಮಂಜೂರಾತಿ ಚೀಟಿ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಬಗರ್-ಹುಕುಂ ಅಡಿಯಲ್ಲಿ ವ್ಯವಸಾಯ ಮಾಡುತ್ತಿದ್ದೆವೆಂದು ಹೇಳಿದ್ದು, ದಾಖಲೆ ಹಾಜರುಮಾಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಹಾಗಾದರೆ ಏನು ದಾಖಲೆ ಹಾಜರುಮಾಡಿರುತ್ತೀರಿ ಎಂದರೆ ಸಾಕ್ಷಿಯು ಮಂಜೂರಾತಿ ಚೀಟಿಯನ್ನು ಹಾಜರುಮಾಡಿರುತ್ತೇವೆಂದು ನುಡಿಯುತ್ತಾರೆ. ಎಷ್ಟನೇ ಇಸವಿಯಲ್ಲಿ ದಾವಾ ಆಸ್ತಿಯು ಮಂಜೂರಾಗಿರುತ್ತದೆಂದು ಹೇಳುವಿರಾ ಎಂದರೆ ಸಾಕ್ಷಿಯು ಇಸವಿ ಹೇಳಲು ನನಗೆ ಗೊತ್ತಾಗುವುದಿಲ್ಲ, ಸುಮಾರು 17 ವರ್ಷ ಆಗಿರುತ್ತದೆಂದು ನುಡಿಯುತ್ತಾರೆ. ಕಲ್ಲೋಡ್ ಗ್ರಾಮದ ಸ.ನಂ. 5 ರಲ್ಲಿ ಒಟ್ಟು ಎಷ್ಟು ಎಕರೆ ವಿಸ್ತೀರ್ಣ ಇರುತ್ತದೆಂದು ಗೊತ್ತಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ಯಾರ್ಯಾರಿಗೆ ಜಮೀನು ಮಂಜೂರಾಗಿರುತ್ತದೆಂದು ಗೊತ್ತಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ಹಳೇ ಸ.ನಂ. 5 ಈಗ ಹೊಸ ಸ.ನಂ. 82 ಎಂದು ಆಗಿರುತ್ತದೆಂದರೆ ಸರಿ. 2008 ನೇ ಇಸವಿಯಲ್ಲಿ ಹಳೇ ಸ.ನಂ. 5 ಹೊಸ ಸ.ನಂ. 82 ಆಗಿ 02 ಎಕರೆ 22 ಗುಂಟೆ ಹೊನ್ನೇಗೌಡ ಎಂಬುವವರ ಹೆಸರಿಗೆ ದುರಸ್ತ್ ಆಗಿ ಖಾತೆ ಆಗಿರುತ್ತದೆಂದರೆ ನನಗೆ ಗೊತ್ತಿಲ್ಲ. 1984 ನೇ ಇಸವಿಯಲ್ಲೇ ಸದರಿ ಹೊನ್ನೇಗೌಡರವರಿಗೆ ಮಂಜೂರು ಚೀಟಿ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ಗಂಡ ದಿನಾಂಕಃ

02.05.2009 ರಂದು ಹೊನ್ನೇಗೌಡರಿಗೆ ಸೇರಿದ 02 ಎಕರೆ 22 ಗುಂಟೆ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಸ್ವಾಧೀನಕ್ಕೆ ಅಡ್ಡಿಪಡಿಸಿದ್ದರಿಂದ ದಿನಾಂಕಃ 25.05.2009 ರಂದು ನಮ್ಮ ವಿರುದ್ಧ ಇದೇ ನ್ಯಾಯಾಲಯದಲ್ಲಿ ಅಸಲು ದಾವೆ ನಂ. 125/2009 ಎಂದು ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಕೋರಿ ದಾವೆ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಗಂಡನ ವಿರುದ್ಧ ಹೊನ್ನೇಗೌಡರು ದಾವೆ ಮಾಡಿದ್ದರು ಎಂದರೆ ಸರಿ, ಸಾಕ್ಷಿಯು ಮುಂದುವರಿದು ಸದರಿ ದಾವೆ ವಜಾ ಆಗಿರುತ್ತದೆಂದು ನುಡಿಯುತ್ತಾರೆ. ದಿನಾಂಕಃ 19.10.2012 ರಂದು ಸದರಿ ದಾವೆಯು ಹೊನ್ನೇಗೌಡರವರ ಪರ ಡಿಕ್ರಿ ಆಗಿರುತ್ತದೆಂದರೆ ಸರಿಯಲ್ಲ. ಸದರಿ ಅಸಲು ದಾವಾ ನಂ. 125/2009 ರ ಆದೇಶದ ಮೇಲೆ ಹುಣಸೂರಿನ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಆರ್.ಎ. 108/2012 ಎಂದು ಅಪೀಲು ಮಾಡಿದ್ದೆವು ಎಂದರೆ ಸರಿ. ದಿನಾಂಕಃ 03.10.2013 ರಲ್ಲಿ ಸದರಿ ಆರ್.ಎ. 108/2012 ವಜಾ ಆಗಿರುತ್ತದೆಂದರೆ ಸಾಕ್ಷಿಯು ನಮ್ಮ ಪರ ಆಗಿರುತ್ತದೆಂದು ನುಡಿಯುತ್ತಾರೆ. ನಾನು ಹೊನ್ನೇಗೌಡರವರ ವಿರುದ್ಧ ಅಸಲು ದಾವಾ ನಂ. 412/2012 ಎಂದು ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಕೋರಿ ದಾವೆ ಮಾಡಿದ್ದೆ ಎಂದರೆ ಸರಿ. ಸದರಿ ದಾವೆಯು ದಿನಾಂಕಃ 26.08.2019 ರಂದು ನನ್ನ ಪರ ಡಿಕ್ರಿ ಆಗಿರುತ್ತದೆಂದರೆ ಸರಿ. ಹುಣಸೂರಿನ ಹಿರಿಯ ಶ್ರೇಣಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಆರ್.ಎ. 108/2012 ವಜಾ ಆದ ನಂತರ ಸದರಿ ಹೊನ್ನೇಗೌಡರವರು ಈ ದಾವೆಯ ಪ್ರತಿವಾದಿ ಶ್ರೀಕಂಠರವರಿಗೆ ಹಳೇ ಸ.ನಂ. 5, ಹೊಸ ಸ.ನಂ. 82 ರ 02 ಎಕರೆ 22 ಗುಂಟೆ ಜಮೀನನ್ನು ನೋಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆಂದರೆ

ಸಾಕ್ಷಿಯು ಹೊನ್ನೇಗೌಡರವರಿಗೆ ಮಾರಾಟ ಮಾಡಲು ಯಾವುದೇ ಜಮೀನು ಇರಲಿಲ್ಲವೆಂದು ನುಡಿಯುತ್ತಾರೆ. ಪ್ರತಿವಾದಿಯು ಹೊನ್ನೇಗೌಡರವರಿಂದ ಸದರಿ ಜಮೀನನ್ನು ಖರೀದಿ ಮಾಡಿದ ನಂತರ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳುಲು ತಾಲ್ಲೋಕು ಕಛೇರಿಗೆ ಅರ್ಜಿ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಶ್ರೀಕಂಠವರ ಹೆಸರೆ ಖಾತೆ ಮಾಡಬಾರದೆಂದು ತಾಲ್ಲೋಕು ಕಛೇರಿಗೆ ತಕರಾರು ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ನಾನು ತಕರಾರು ಅರ್ಜಿ ಸಲ್ಲಿಸಿದ ನಂತರ ತಾಲ್ಲೊಕು ಕಛೇರಿಯಲ್ಲಿ ಆರ್.ಆರ್.ಟಿ.ನಂ. 190/2021-2022 ಎಂದು ಪ್ರಕರಣ ದಾಖಲು ಮಾಡಿ, ವಿಚಾರಣೆ ನಡೆಸಿ ಕ್ರಯ ಪತ್ರದ ಆಧಾರದ ಮೇಲೆ ಪ್ರತಿವಾದಿ ಶ್ರೀಕಂಠರವರ ಹೆಸರಿಗೆ ಸ.ನಂ. 82 ರಲ್ಲಿ 02 ಎಕರೆ 22 ಗುಂಟೆ ಜಮೀನನ್ನು ಖಾತೆ ಮಾಡಿರುತ್ತಾರೆಂದರೆ ಸಾಕ್ಷಿಯು ಹೊನ್ನೇಗೌಡರವರು ಶ್ರೀಕಂಠರವರಿಗೆ ಮಾರಾಟ ಮಾಡಲು ಅವರ ಬಳಿ ಯಾವುದೇ ಜಮೀನು ಇರಲಿಲ್ಲವೆಂದು ನುಡಿಯುತ್ತಾರೆ. ಪೂರ್ವಕ್ಕೆ - ರಸ್ತೆ, ಪಶ್ಚಿಮಕ್ಕೆ - ಮಲ್ಲಣ್ಣನ ಜಮೀನು, ಉತ್ತರಕ್ಕೆ - ಕಾಳನಿಂಗಮ್ಮ ಮತ್ತು ಮಹದೇವರವರ ಜಮೀನು ಮತ್ತು ದಕ್ಷಿಣಕ್ಕೆ ಮಲ್ಲಣ್ಣರವರ ಜಮೀನಿನ ಮಧ್ಯೆ ಇರುವ 02 ಎಕರೆ 22 ಗುಂಟೆ ಜಮೀನನ್ನು ಹೊನ್ನೇಗೌಡರವರಿಂದ ಶ್ರೀಕಂಠರವರು ಖರೀದಿಸಿ ಮಾಡಿರುತ್ತಾರೆಂದರೆ ಸರಿಯಲ್ಲ. ಹೊನ್ನೇಗೌಡರವರು ನಮ್ಮ ವಿರುದ್ಧ ದಾವೆಗಳನ್ನು ಮಾಡಿದ್ದು, ಸದರಿ ದಾವೆಗಳ ಬಗ್ಗೆ ಈ ದಾವೆಯಲ್ಲಿ ಹೇಳಿಲ್ಲವೆಂದರೆ ಸರಿ. ಯಾವ ದಿನಾಂಕ, ಯಾವ ತಿಂಗಳು ಮತ್ತು ಯಾವ ವರ್ಷ ಪ್ರತಿವಾದಿಗಳು ತಮಗೆ ತೊಂದರೆ ಕೊಟ್ಟಿರುತ್ತಾರೆಂದು ಹೇಳುವಿರಾ ಎಂದರೆ ಸಾಕ್ಷಿಯು ತಾನು ಅನಕ್ಷರಸ್ಥೆ ದಿನಾಂಕ, ತಿಂಗಳು ಮತ್ತು ವರ್ಷ ಹೇಳಲು ಆಗುವುದಿಲ್ಲವೆಂದು ನುಡಿದು ಸಂಜೆ 04.00 ಗಂಟೆ

ಎಂದು ನುಡಿಯುತ್ತಾರೆ. ಹೊನ್ನೇಗೌಡ ಮತ್ತು ನಮ್ಮ ನಡುವೆ ಮೊದಲಿನಿಂದಲೂ ಮನಃಸ್ತಾಪವಿದ್ದು, ಅವರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಪ್ರತಿವಾದಿಗಳ ಸುಳ್ಳು ದಾವೆ ಹೂಡಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವೆ ಹೂಡಲು ಯಾವುದೇ ಸಕಾರಣ ಉದ್ಭವಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**